| | |
|---|---|
| BESCOM | # ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ<br>(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ) |

| | |
|---|---|
| ದೂರವಾಣಿ : 080-2234 1199<br>ಇಮೇಲ್ ಐಡಿ : gmdsm@bescom.co.in | ಪ್ರಧಾನ ವ್ಯವಸ್ಥಾಪಕರು (ವಿ), ರವರ ಕಛೇರಿ<br>ಡಿಎಸ್ಎಂ, ಬೆವಿಕಂ,<br>ಕೆ.ಆರ್.ವೃತ್ತ, ಬೆಂಗಳೂರು. |
| ಸಂಖ್ಯೆ : ಬೆವಿಕಂ/ಬಿಸಿ-51/3584/2015-16/ಸಿ.ವೈ.ಎಸ್-08 | ದಿನಾಂಕ: 03-07-2018 |

ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ,),
ಕಾ ಮತ್ತು ಪಾ ಉಪ ವಿಭಾಗ,
ಬೆ.ವಿ.ಕಂ.

ಮಾನ್ಯರೇ,

**ವಿಷಯ:** ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳ ಅಳವಡಿಕೆಗೆ ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸುವ ಬಗ್ಗೆ

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 54 ವಿಎಸ್‌ಸಿ 2014 ದಿನಾಂಕ:28.02.2015.
2. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಎನ್ 54 ವಿಎಸ್‌ಸಿ 2014 ದಿನಾಂಕ:12.08.2015.
3. ಸರ್ಕಾರಿ ಪತ್ರ ಸಂಖ್ಯೆ: ಇಎನ್ 54 ವಿಎಸ್‌ಸಿ 2014 ದಿನಾಂಕ:17.06.2015.
4. ಸರ್ಕಾರಿ ಪತ್ರ ಸಂಖ್ಯೆ: ಇಎನ್ 48 ವಿಎಸ್‌ಸಿ 2016 ದಿನಾಂಕ:01.09.2016.
5. ಸರ್ಕಾರಿ ಆದೇಶ ಸಂಖ್ಯೆ: ಇಎನ್ 48 ವಿಎಸ್‌ಸಿ 2016 ದಿನಾಂಕ:05.01.2017.
6. ಈ ಕಛೇರಿ ಪತ್ರ ಸಂಖ್ಯೆ: ಬೆವಿಕಂ/ಬಿಸಿ-51/3584/2015-16/ಸಿ.ವೈ.ಎಸ್-06, ದಿನಾಂಕ:29.06.2017.
7. ಈ ಕಛೇರಿ ಪತ್ರ ಸಂಖ್ಯೆ: ಬೆವಿಕಂ/ಬಿಸಿ-51/3584/2015-16/ಸಿ.ವೈ.ಎಸ್-07, ದಿನಾಂಕ:19.07.2017.
8. ಸರ್ಕಾರಿ ಆದೇಶ ಸಂಖ್ಯೆ: ಇಎನ್ 17 ವಿಎಸ್‌ಸಿ 2017 ದಿನಾಂಕ:23.11.2017.
9. ಸರ್ಕಾರಿ ಆದೇಶ ಸಂಖ್ಯೆ: ಇಎನ್ 64 ವಿಎಸ್‌ಸಿ 2018 ದಿನಾಂಕ:06.03.2018.
10. ದಿನಾಂಕ:26.05.2018 ರಂದು ನಡೆದ ಸಭಾ ನಡಾವಳಿ ಸಂಖ್ಯೆ: ಬೆವಿಕಂ/ಬಿಸಿ-51/3584/2015-16/ ಸಿವೈಎಸ್-05, ದಿನಾಂಕ:07.06.2018.
11. ಸರ್ಕಾರಿ ಆದೇಶ ಸಂಖ್ಯೆ: ಇಎನ್ 63 ವಿಎಸ್‌ಸಿ 2018 ದಿನಾಂಕ:12.06.2018.
12. ಕೆ.ಆರ್.ಇ.ಡಿ.ಎಲ್ ಪತ್ರ ಸಂಖ್ಯೆ: ಕೆ.ಆರ್.ಇ.ಡಿ/07/ಸೋಲಾರ್-51/SWP/SOG-2/2018/4232, ದಿನಾಂಕ: 14.06.2018.
13. ಕೆ.ಆರ್.ಇ.ಡಿ.ಎಲ್ ಪತ್ರ ಸಂಖ್ಯೆ: ಕೆಆರ್ಇಡಿಎಲ್/07/SOG-2/41/2018/4471, ದಿನಾಂಕ: 28.06.2018.
14. ಪತ್ರಿಕಾ ಜಾಹಿರಾತು ದಿನಾಂಕ:30.06.2018 (ವಿಜಯ ಕರ್ನಾಟಕ, ಕನ್ನಡ ಪ್ರಭಾ, ಪ್ರಜಾವಾಣಿ ಮತ್ತು ಸಂಯುಕ್ತ ಕರ್ನಾಟಕ).

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕೆ.ಆರ್.ಇ.ಡಿ.ಎಲ್.) ಮೂಲಕ ರೈತರ ಕಲ್ಯಾಣಕ್ಕಾಗಿ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆಯನ್ನು ತಾಲ್ಲೂಕುವಾರು ಹಂಚಿಕೆಮಾಡಿ ಮೂರು ಹಂತಗಳಲ್ಲಿ ಉಲ್ಲೇಖ (1 ರಿಂದ 5, 8, 9) ಗಳನ್ವಯ ಆದೇಶಿಸಿದೆ. ಈ ಯೋಜನೆಯಡಿಯಲ್ಲಿ ರೈತರಿಗೆ 5 ಹೆಚ್.ಪಿ. ಸಾಮರ್ಥ್ಯದ ಸಬ್‌ಮರ್ಸಿಬಲ್ ಪಂಪ್‌ಸೆಟ್ ಮತ್ತು ಸೌರಘಟಕವನ್ನು ಕೆ.ಆರ್.ಇ.ಡಿ.ಎಲ್. ವತಿಯಿಂದ ಒದಗಿಸಲಾಗುವುದು ಹಾಗೂ ಪ್ರತಿ ಘಟಕವು 5 ವರ್ಷಗಳ Comprehensive Maintenance ಮತ್ತು Warranty ಹೊಂದಿರುತ್ತದೆ.

ಈ ಯೋಜನೆಗೆ ಎಂ.ಎನ್.ಆರ್.ಇ. ರವರಿಂದ ಅನುಮೋದನೆಯಾಗಿರುವ ಸಹಾಯಧನವನ್ನು ದಿನಾಂಕ:30.09.2018 ರೊಳಗೆ ಉಪಯೋಗಿಸಬೇಕಾಗಿರುವುದರಿಂದ ಫಲಾನುಭವಿಗಳನ್ನು ಗುರುತಿಸುವಿಕೆಯಲ್ಲಿ ಆಗುತ್ತಿರುವ ವಿಳಂಬವನ್ನು ಕರ್ನಾಟಕ ಸರ್ಕಾರವು ಗಮನಿಸಿ, ತಾಲ್ಲೂಕುವಾರು ಹಂಚಿಕೆಯ ಬದಲಾಗಿ ರಾಜ್ಯ ವ್ಯಾಪ್ತಿಗೆ ವಿಸ್ತರಿಸಲು ಉಲ್ಲೇಖ (11) ರನ್ವಯ ಆದೇಶವನ್ನು ಹೊರಡಿಸಲಾಗಿದೆ. ಸದರಿ ಆದೇಶದನ್ವಯ ಈಗಾಗಲೇ ಗುರುತಿಸಲಾಗಿರುವ ಫಲಾನುಭವಿಗಳನ್ನು ಹೊರತುಪಡಿಸಿ, ಬಾಕಿ ಇರುವ ಜಾಲಮುಕ್ತ ಸೌರ ಪಂಪ್‌ಸೆಟ್‌ಗಳನ್ನು "ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ" ಆನ್‌ಲೈನ್ ಮುಖಾಂತರ ರಾಜ್ಯಾದ್ಯಂತ ವಿಸ್ತರಿಸಿ ಫಲಾನುಭವಿಗಳಿಗೆ ಹಂಚಿಕೆ ನೀಡಲು ಸೂಚಿಸಲಾಗಿದೆ.

ಸಾಮಾನ್ಯ ವರ್ಗಕ್ಕೆ 1600 ಸಂಖ್ಯೆ, ಪರಿಶಿಷ್ಟ ಜಾತಿಯ ವರ್ಗಕ್ಕೆ 140 ಸಂಖ್ಯೆ ಹಾಗೂ ಪರಿಶಿಷ್ಟ ಪಂಗಡದ ವರ್ಗಕ್ಕೆ 91 ಸಂಖ್ಯೆ, ಒಟ್ಟಾರೆಯಾಗಿ 1831 ಸಂಖ್ಯೆಗಳ ಜಾಲಮುಕ್ತ ನೀರಾವರಿ ಸೌರ ಪಂಪ್‌ಸೆಟ್‌ಗಳನ್ನು ರೈತರಿಗೆ ಅಳವಡಿಸಿಕೊಡಲು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಉಲ್ಲೇಖ (14) ರನ್ವಯ ಕೆ.ಆರ್.ಇ.ಡಿ.ಎಲ್ ಸಂಸ್ಥೆಯು ಅರ್ಜಿದಾರರಿಂದ ದಿನಾಂಕ:02.07.2018 ರಿಂದ ಅರ್ಜಿಯನ್ನು ಆಹ್ವಾನಿಸಿದೆ.

ಕೆ.ಆರ್.ಇ.ಡಿ.ಎಲ್ ಉಲ್ಲೇಖ ಪತ್ರ (13) ರನ್ವಯ ಈ ಕೆಳಕಂಡ ಪಾತ್ರ ನಿರ್ವಹಣೆಯನ್ನು ಸರ್ಕಾರಿ ಆದೇಶದಂತೆ ಕ್ರಮವಹಿಸಲು ಸೂಚಿಸಲಾಗಿದೆ:

- ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ನೇರವಾಗಿ ಅರ್ಜಿದಾರರೆ (www.kredlinfo.in) ನೊಂದಾಯಿಸುವುದು.
- ಈ ರೀತಿ ನೊಂದಾವಣೆಗೊಂಡ ವಿವರಗಳನ್ನು ಕೆ.ಆರ್.ಇ.ಡಿ.ಎಲ್. ಕಛೇರಿಯಿಂದ ಇ-ಮೇಲ್ ಮುಖಾಂತರ ಮಾಹಿತಿಯನ್ನು ಒದಗಿಸಲಾಗುವುದು.
- ಎಂ.ಎನ್.ಆರ್.ಇ. ಮಾನದಂಡದನ್ವಯ ಮೋಟಾರ್ ಪಂಪ್‌ಸೆಟ್‌ನ ಸಾಮರ್ಥ್ಯ 5 ಹೆಚ್.ಪಿ. ಹಾಗೂ ನೀರೆತ್ತುವ ಒಟ್ಟಾರೆ ಆಳವು (Dynamic Head) 70 ಮೀಟರ್‌ಗಳಿಗೆ (230 ಅಡಿ) ಸೀಮಿತಗೊಳಿಸಲಾಗಿದೆ.
- ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯುವ ಮತ್ತು ಹಾಲಿ ವಿದ್ಯುತ್ ಸಂಪರ್ಕದಲ್ಲಿರುವ ರೈತರ ಕೃಷಿ ಪಂಪ್‌ಸೆಟ್‌ಗಳಿಗೂ ಸಹ ಈ ಯೋಜನೆಯು ಅನ್ವಯಿಸುತ್ತದೆ (ಹಾಲಿ ವಿದ್ಯುತ್ ಸಂಪರ್ಕವನ್ನು ಶಾಶ್ವತ ನಿಲುಗಡೆಗೊಳಿಸಿದ ಬಳಿಕ).
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರಿಗೆ ಉಚಿತ.
- ಸಾಮಾನ್ಯ ವರ್ಗದ ಫಲಾನುಭವಿಗಳು ಪ್ರತಿ ಸೌರ ಪಂಪ್‌ಸೆಟ್‌ಗೆ ರೂ.ಒಂದು ಲಕ್ಷ ವಂತಿಗೆಯ ಡಿ.ಡಿ.ಯನ್ನು MD, KREDL ಹೆಸರಿನಲ್ಲಿ ಪಡೆಯಬೇಕು ಅಥವಾ ಆರ್.ಟಿ.ಜಿ.ಎಸ್. ಆನ್‌ಲೈನ್ ಮುಖಾಂತರ ಈ ಕೆಳಕಂಡ ಖಾತೆಗೆ ಪಾವತಿಸಬೇಕಾಗಿರುತ್ತದೆ.
    - ಖಾತೆದಾರರ ಹೆಸರು : Karnataka Renewable Energy Development Ltd
    - ಖಾತೆ ಸಂಖ್ಯೆ : 546601010050485
    - ಬ್ಯಾಂಕ್ ಹೆಸರು : Union Bank of India
    - ಬ್ಯಾಂಕ್ ಶಾಖೆ : Ganganagar
    - ಖಾತೆ ಮಾದರಿ : current account
    - ಐ.ಎಫ್.ಎಸ್.ಸಿ ಕೋಡ್ : UBIN0554669
    - ಎಂ.ಐ.ಸಿ.ಆರ್ ಕೋಡ್ : 560026026
- ಆನ್‌ಲೈನ್ ಮಾದ್ಯಮದ ಮುಖಾಂತರ ಅರ್ಜಿ ಸಲ್ಲಿಸಿದ ನಂತರ ಐದು ದಿನದೊಳಗಾಗಿ ಸ್ವೀಕೃತಗೊಂಡ ಅರ್ಜಿಯ ಪ್ರತಿಯೊಂದಿಗೆ (acknowledgement of application printout) ಸ್ವಯಂ ದೃಢೀಕರಿಸಿದ ಇತರೆ ದಾಖಲೆಗಳಾದ ಆಧಾರ್ ಪ್ರತಿ, ಮೂಲ ಡಿ.ಡಿ. ಅಥವಾ ಆರ್.ಟಿ.ಜಿ.ಎಸ್. ವಿವರ, ಭೂದಾಖಲೆ (RTC), ಇತ್ತೀಚಿನ 2 ಭಾವಚಿತ್ರಗಳು, ಜಾತಿ ಪ್ರಮಾಣ ಪತ್ರ (SC/ST), ನೀರು ಇಳುವರಿ ಪತ್ರ (Water yield certificate) ಗಳನ್ನು ಅರ್ಜಿದಾರರಿಂದ ಸಂಬಂಧಪಟ್ಟ ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ,) ರವರು ಪಡೆಯುವುದು.
- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ,) ರವರು ಅರ್ಜಿದಾರರು ಸಲ್ಲಿಸಿದ ದಾಖಲೆಗಳನ್ನಾಧರಿಸಿ ಸ್ಥಳ ಪರಿಶೀಲಿಸುವುದು.
- ಕೊಳವೆ ಬಾವಿಯ ನೀರಿನ ಆಳದ ಬಗ್ಗೆ ಕಾರ್ಯಕ್ಷಮತೆಯನ್ನು ತಿಳಿಯಲು ಅನುಷ್ಠಾನಗೊಳಿಸುವ ಸಂಸ್ಥೆಯವರೊಂದಿಗೆ (Agency) ಸ್ಥಳ ಪರಿಶೀಲನೆ ಮಾಡಿದ ನಂತರ ಕಾರ್ಯಕ್ಷಮತೆಯ ವರದಿಯನ್ನು (Feasibility Report) ಸಿದ್ಧಪಡಿಸಿ, ಯೋಜನಾ ವಂತಿಗೆಯ ಮೂಲ ಡಿ.ಡಿ. ಮತ್ತು ಇತರೆ ದಾಖಲೆಗಳೊಂದಿಗೆ ಕೆ.ಆರ್.ಇ.ಡಿ.ಎಲ್. ಸಂಸ್ಥೆಗೆ 10 ದಿನಗಳೊಳಗಾಗಿ ನೇರವಾಗಿ ಸಲ್ಲಿಸಿ, ಪ್ರತಿಯನ್ನು ಡಿ.ಎಸ್.ಎಂ. ಶಾಖೆ, ಬೆವಿಕಂಗೆ ಕಳುಹಿಸಿಕೊಡುವುದು.

| ಕಾರ್ಯಕ್ಷಮತೆಯ ವರದಿ | | |
|---|---|---|
| ಕ್ರ.ಸಂ. | ವಿಷಯ | ವಿವರ |
| 1 | ಅರ್ಜಿದಾರನ ಹೆಸರು ಮತ್ತು ವಿಳಾಸ | |
| 2 | ಮೋಟಾರ್ ಸಾಮರ್ಥ್ಯ | |
| 3 | ಆರ್.ಟಿ.ಸಿ. ವಿವರಗಳು | |
| 4 | ಬೆವಿಕಂ ವಿದ್ಯುತ್ ಸಂಪರ್ಕ ಸೌಲಭ್ಯ | ಹೌದು/ಇಲ್ಲ |
| 5 | ವಿದ್ಯುತ್ ಸಂಪರ್ಕ (ಆರ್.ಆರ್.ಸಂಖ್ಯೆ) ಹೊಂದಿದ್ದರೆ, ಕಡಿತಗೊಳಿಸಲಾಗಿದೆಯೇ | ಹೌದು/ಇಲ್ಲ |
| 6 | ಅನುಷ್ಠಾನಗೊಳಿಸುವ ಏಜೆನ್ಸಿರವರ ಕಾರ್ಯಕ್ಷಮತೆ ವರದಿ (ಕೊಳವೆ ಬಾವಿಯ ನೀರಿನ ಆಳದ ಬಗ್ಗೆ) ಯನ್ನು ಲಗತ್ತಿಸುವುದು | |
| 7 | ಇತರೆ ಮಾಹಿತಿಗಳು | |

- ಸಂಬಂಧಿಸಿದ ಸಕಾಇಂ(ವಿ,) ರವರು ದಾಖಲೆಗಳನ್ನು ಪರಿಶೀಲಿಸಿ ತಾಳೆ ಹೊಂದದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸುವುದು ಹಾಗೂ ಸ್ಥಳ ಪರಿಶೀಲನೆ ಸಮಯದಲ್ಲಿ ಯಾವುದೇ ದಾಖಲೆಗಳಲ್ಲಿ ನ್ಯೂನತೆ ಕಂಡುಬಂದಲ್ಲಿ ಅರ್ಜಿಯನ್ನು ತಿರಸ್ಕರಿಸುವುದು.
- ಆನ್‌ಲೈನ್‌ನಲ್ಲಿ ನೋಂದಾವಣೆಗೊಂಡ ಅರ್ಜಿದಾರರು 5 ದಿನಗಳೊಳಗಾಗಿ ಯಾವುದೇ ಮಾಹಿತಿಯನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ, ಸಕಾಇಂ(ವಿ,) ರವರು ಲಭ್ಯವಿರುವ ಮಾಹಿತಿಯನ್ನಾಧರಿಸಿ ದಾಖಲೆಗಳನ್ನು ಸಂಗ್ರಹಿಸಿ ಪರಿಶೀಲಿಸುವುದು. ಇಲ್ಲದಿದ್ದಲ್ಲಿ, ಅರ್ಜಿಯನ್ನು ತಿರಸ್ಕೃತಗೊಳಿಸಿ, ತಿರಸ್ಕೃತಗೊಂಡ ಅರ್ಜಿ ವಿವರಗಳನ್ನು ಕೆ.ಆರ್.ಇ.ಡಿ.ಎಲ್. ಕಛೇರಿ/ಡಿ.ಎಸ್.ಎಂ. ಶಾಖೆ, ಬೆವಿಕಂಗೆ ಇ-ಮೇಲ್ (gmdsm@bescom.co.in) ಮುಖಾಂತರ ಕೂಡಲೇ ಸಲ್ಲಿಸುವುದು.
- ಸಕಾಇಂ(ವಿ,) ರವರು ಸಲ್ಲಿಸಿದ ಕಾರ್ಯಕ್ಷಮತೆಯ ವರದಿಯ ಆಧಾರದ ಮೇಲೆ ಅನುಷ್ಠಾನ ಮಾಡುವ ಸಂಸ್ಥೆಯು (ಕೆ.ಆರ್.ಇ.ಡಿ.ಎಲ್.ನ ಕಾರ್ಯಾದೇಶ ಆಧಾರದ ಮೇಲೆ) ಸೌರ ಪಂಪ್‌ಸೆಟ್ ಘಟಕವನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.
- ಸಕಾಇಂ(ವಿ,) ರವರು ಕಾರ್ಯಾನುಷ್ಠಾನಗೊಂಡ ಸ್ಥಾವರಗಳಿಗೆ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ನೀಡುವುದು.
- ವರ್ಗವಾರು ನೀಡಲಾಗಿರುವ ಉದ್ದೇಶಿತ ಗರಿಷ್ಠ ಅರ್ಜಿಗಳ ಸಂಖ್ಯೆ ತಲುಪಿದ ನಂತರ ಅರ್ಜಿ ನೊಂದಾವಣಿ ಪ್ರಕ್ರಿಯೆಯು ಮುಕ್ತಾಯಗೊಳ್ಳುವುದು.
- ಹೆಚ್ಚಿನ ಮಾಹಿತಿಗಾಗಿ ಕೆ.ಆರ್.ಇ.ಡಿ.ಎಲ್ ಸಂಸ್ಥೆಯ ದೂರವಾಣಿ ಸಂಖ್ಯೆ 080-22202100 ನ್ನು ಸಾರ್ವಜನಿಕರು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಪ್ರಧಾನ ವ್ಯವಸ್ಥಾಪಕರು(ವಿ),
ಡಿ.ಎಸ್.ಎಂ, ಬೆವಿಕಂ.

**ಪ್ರತಿಗಳು ದಯಾಪರ ಮಾಹಿತಿಗಾಗಿ:**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಪ್ರಾಧಿಕಾರ, #39, "ಶಾಂತಿ ಗೃಹ" ಭಾರತ್ ಸ್ಕೌಟ್ ಮತ್ತು ಗೈಡ್ಸ್ ಕಟ್ಟಡ, ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕಛೇರಿ ಎದುರು, ಅರಮನೆ ರಸ್ತೆ, ಬೆಂಗಳೂರು-560001.

**ಪ್ರತಿಗಳು ಮಾಹಿತಿಗಾಗಿ:**

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ), ಕಾರ್ಯಾಚರಣೆ, ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ&ಪಾ ವಲಯ, ಬೆವಿಕಂ.
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ&ಪಾ ವೃತ್ತ, ಬೆವಿಕಂ.
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ವಿಭಾಗ, ಬೆವಿಕಂ ಅಗತ್ಯ ಕ್ರಮಕ್ಕಾಗಿ.
5. ವ್ಯ.ನಿ/ನಿ(ತಾಂ) ರವರ ಆಪ್ತ ಕಾರ್ಯದರ್ಶಿ, ಬೆವಿಕಂ ರವರು ವ್ಯ.ನಿ/ನಿ(ತಾಂ), ಬೆವಿಕಂ ರವರ ಗಮನಕ್ಕೆ ತರಲು ಕೋರಿದೆ.
6. ಕಛೇರಿ ಪ್ರತಿ/ಮುಖ್ಯ ಕಡತ.